C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No. 90/2017

ದಿನಾಂಕ : 21.07.2022 ಪ್ರಮಾಣ ವಚನ ಬೋದಿಸಲಾಗಿದೆ ಸಿ. ಡಬ್ಲ್ಯೂ :1 ಪಿ. ಡಬ್ಲ್ಯೂ : 1

| | |
|---|---|
| ಸಾಕ್ಷಿದಾರರ ಹೆಸರು | ಜಿ. ಬಿ. ಬೊರೇಗೌಡ |
| ತಂದೆಯ ಹೆಸರು | ಬೊರೇಗೌಡ |
| ವಯಸ್ಸು | 31 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗುರುದೇವರಹಳ್ಳಿ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನ್ಯಾಯಾಲಯದ ಮುಂದಿರುವ ಆರೋಪಿ ವಿದ್ಯುತ್ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದು ಆತ ನನಗೆ ಗೊತ್ತು. ಟಿ ಸಿ ಅಳವಡಿಸಿಕೊಡಲು ಆರೋಪಿ ಗೋವಿಂದರಾಜು ಲಂಚ ಕೇಳಿದ್ದು ಅವರ ವಿರುದ್ದ ದೂರು ಕೊಡಲು 2015 ರಲ್ಲಿ ನಾನು ಲೋಕಾಯುಕ್ತ ಕಚೇರಿಗೆ ಹೋಗಿದ್ದೆ, ನಮ್ಮ ಜಮೀನಿನಲ್ಲಿ ಸದರಿ ಟಿ ಸಿ ಯನ್ನು ಅಳವಡಿಸಿಕೊಡಬೇಕಾಗಿತ್ತು. 2013 ರಲ್ಲಿ ನಾನು ಆ ಬಗ್ಗೆ ಅರ್ಜಿಯನ್ನು ಕೊಟ್ಟಿದ್ದೆನು. ಟಿ ಸಿ ಅಳವಡಿಸಲು ಆರೋಪಿ 25 ಸಾವಿರ ರೂಗಳನ್ನು ಲಂಚವಾಗಿ ಕೊಡಬೇಕೆಂದು ನನ್ನನ್ನು ಕೇಳಿದ್ದರು. ನನ್ನಂತೆಯೇ ಪುಟ್ಟಸ್ವಾಮಿ, ಚೆನ್ನೇಗೌಡ ಮತ್ತು ರತ್ನಮ್ಮ ಟಿ ಸಿ ಅಳವಡಿಸಲು ಅರ್ಜಿ ನೀಡಿದ್ದರು. ಆರೋಪಿ ಎಸಿಟಿಮೇಟ್ ಹಾಕಿ ಕೊಡುತ್ತೇನೆಂದು ಹೇಳಿದವರು ಲಂಚ ಕೇಳಿದ್ದು ನಾನು ಅಷ್ಟು ಕೊಡಲು ಆಗುವುದಿಲ್ಲ ಎಂದು ಹೇಳಿದಾಗ ಆರೋಪಿ ಬೇಕಾದರೆ ಟಿಸಿ ಹಾಕಿಸಿಕೋ ಇಲ್ಲವಾದರೆ ಬಿಡು ಎಂದು ಹೇಳಿದರು. ಆದುದರಿಂದ ನಾನು ಮತ್ತು ಲೊಕೇಶ ಲೋಕಾಯುಕ್ತ ಕೆಚೇರಿಗೆ ಬಂದು ಅಲ್ಲಿ ಅಧಿಕಾರಿ ದಿನೇಶ್ ಕುಮಾರ್ ರವರನ್ನು ಭೇಟಿ ಮಾಡಿದೆವು. ಸದರಿ ಅಧಿಕಾರಿ ನಮಗೆ ಸಾಕ್ಷಿ ಬೇಕೆಂದು ಹೆಳಿ ವಾಯ್ಸ್ ರೆಕಾರ್ಡರ್ ಅನ್ನು ನಮಗೆ ಕೊಟ್ಟರು. ಆರೋಪಿ ಮದ್ದೂರಿನಲ್ಲಿ ಮಾಡಿಕೊಂಡಿದ್ದ ರೂಮಿಗೆ ನಾನು ಹೋದೆನು. ಆಗ ಆರೋಪಿ ನನ್ನನ್ನು ಹಣ ತಂದಿದ್ದೀಯಾ ಎಂದು ಕೇಳಿದರು. ಆಗ ನಾನು ನನ್ನ ಬಳಿ ಇದ್ದ 3 ಸಾವಿರ ರೂಗಳನ್ನು ಆರೋಪಿಗೆ ಕೊಟ್ಟೆನು. ಆಗ ಆರೋಪಿ ಕಂಬ ಎತ್ತಲು 5 ಸಾವಿರ ರೂ ಬೇಕಾಗುತ್ತದೆ ಎಂದು ಹೇಳಿ ಅವಾಚ್ಯ ಶಬ್ದಗಳಿಂದಲೂ ಬೈದರು. ಇದೆಲ್ಲವೂ ವಾಯ್ಸ್ ರೆಕಾರ್ಡರ್ ನಲ್ಲಿ ರೆಕಾರ್ಡ್ ಆಯಿತು.

2. 2015 ರಲ್ಲಿ ನಾನು ಸದರಿ ವಾಯ್ಸ್ ರೆಕಾರ್ಡರ್ ಅನ್ನು ತೆಗೆದುಕೊಂಡು ಲೋಕಾಯುಕ್ತ ಕಚೇರಿಗೆ ಹೋದೆನು. ನನ್ನೊಂದಿಗೆ ಲೊಕೇಶ ಸಹ ಬಂದಿದ್ದರು. ನಾನು ಕೊಟ್ಟಿದ್ದ ವಾಯ್ಸ್ ರೆಕಾರ್ಡರ್ ಅನ್ನು ಲೋಕಾಯುಕ್ತ ಅಧಿಕಾರಿಗಳು ಹಾಕಿಕೊಂಡು ಕೇಳಿದರು. ಸದರಿ ವಾಯ್ಸ್ ರೆಕಾರ್ಡರ್ ಕೊಟ್ಟ ನಂತರ ನಾನು ಪೋಲೀಸರಿಗೆ ಕೇಸು ಕೊಟ್ಟೆ. ದೂರಿನಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದೂರನ್ನು ಗುರುತಿಗಾಗಿ ನಿಪಿ-1 ಎಂದೂ, ಸಾ. ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನನಗೆ ಓದಲು ಬರುವುದಿಲ್ಲ ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ.

ಮುಂದುವರೆದ ಮುಖ್ಯ ವಿಚಾರಣೆಯನ್ನು ಸಾಕ್ಷಿ ಸರಿಯಾಗಿ ಪ್ರಶ್ನೆಗಳಿಗೆ ಸ್ಪಂದಿಸುತ್ತಿಲ್ಲವಾದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.